**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 277/2017**

**ವಾ.ಸಾ-2**

**ಸಾಕ್ಷಿಗೆ ದಿನಾಂಕಃ 02-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಕೆ.ಜಿ ಪ್ರತಿವಾದಿಯರ ಪರ ವಕೀಲರಿಂದಃ**

1. ಮೃತ ಬೋರೇಗೌಡ ಮತ್ತು ನಾನು ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರ ಪರಿಚಯ ಇದೆ. ನಾನು ಮತ್ತು ಅವರು ಅಂದಾಜು 7-8 ವರ್ಷಗಳ ಕಾಲ ಒಟ್ಟಿಗೆ ಕೆಲಸ ಮಾಡಿದ್ದೇವೆ. ನಾನು ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನನ್ನು ಲೋಕಾಯುಕ್ತ ಅಧಿಕಾರಿಗಳು ನನ್ನನ್ನು ಟ್ರಾಪ್ ಮಾಡಿದ್ದರು ಎಂದರೆ ಸಾಕ್ಷಿಯು ರೈತರ ಕಡೆಯಿಂದ ಟ್ರಾಪ್ ಮಾಡಿಸಿದ್ದರು ಎಂದು ನುಡಿಯುವರು.

2. ರೈತರಿಗೆ ಸಪೋಟ ಸಸಿಗಳ 2 ನೇ ಕಂತಿನ ಸಹಾಯಧನ ಕೊಟ್ಟಿಲ್ಲ ಎಂದು ಲೋಕಾಯುಕ್ತದಿಂದ ಟ್ರಾಪ್ ಮಾಡಿಸಿದ್ದರು. ಸಾಕ್ಷಿಯು ಮುಂದುವರೆದು ಅದರಲ್ಲಿ ನನ್ನದು ಏನೂ ತಪ್ಪಿರಲಿಲ್ಲ. ನಾನು ರೈತರಿಗೆ ಸರ್ಕಾರದಿಂದ ಸವಲತ್ತುಗಳನ್ನು ಕೊಡಿಸುತ್ತೇನೆ ಎಂದು ರೈತರಿಂದ ಕಾನೂನು ಬಾಹಿರವಾಗಿ ಹಣ ವಸೂಲಿ ಮಾಡುತ್ತಿದ್ದ ಕಾರಣ ಲೋಕಾಯುಕ್ತ ಟ್ರಾಪ್ ಆಗಿತ್ತು ಎಂದರೆ ಸರಿಯಲ್ಲ. ನಾನು ಸುಮಾರು ವರ್ಷಗಳ ಕಾಲ ಸೇವೆಯಿಂದ ಅಮಾನತ್ತಿನಲ್ಲಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ 6 ತಿಂಗಳು ಎಂದು ನುಡಿಯುವರು.

3. ನನ್ನ ಸ್ವಂತ ಊರು ಬಿಂಡಿಗನವಿಲೆಯ ಹೊನ್ನಾವರ. ಆದರೆ ನಾನು ಬೆಳೆದಿದ್ದು ನನ್ನ ತಾಯಿಯ ಮನೆಯಾದ ಬೆಳ್ಳೂರು ಹೋಬಳಿಯ

**ಅಸಲು ದಾವಾ ಸಂಖ್ಯೆ. 277/2017**
**ವಾ.ಸಾ-2**

ತಿಗಳನಹಳ್ಳಿಯಲ್ಲಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾಸಸ್ಥಳವನ್ನು ಕೋಟೆಬೆಟ್ಟ ರಸ್ತೆ, ನಾಗಮಂಗಲ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ವಿಳಾಸ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಅಲ್ಲಿಯೇ ವಾಸವಿದ್ದೇನೆ ಎಂದು ನುಡಿಯುವರು.

4. ನನಗೆ ಕೆ.ಇ.ಬಿ ನಿಂಗೇಗೌಡರ ಮಗ ಸುರೇಶ್ ಗೌಡರ ಪರಿಚಯ ಇದೆ ಎಂದರೆ ಸರಿಯಲ್ಲ. ಸದರಿ ಸುರೇಶ್ ರವರು ಈ ದಿನ ನ್ಯಾಯಾಲಯದ ಆವರಣಕ್ಕೆ ಬಂದಿದ್ದರು ಮತ್ತು ನಾನು ಹಾಗೂ ಸದರಿ ಸುರೇಶ್ ರವರು ನ್ಯಾಯಾಲಯದ ಹೊರ ಆವರಣದಲ್ಲಿ ಮಾತನಾಡಿಕೊಂಡು ನಂತರ ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಈದಿನ ನ್ಯಾಯಾಲಯದ ಆವರಣದಲ್ಲಿ ಸುರೇಶ್ ರವರು ಇದ್ದಾರೋ ಇಲ್ಲವೂ ನನಗೆ ಗೊತ್ತಿಲ್ಲ.

5. ನನಗೆ ದೇವರಾಜು ಎಂಬುವವರ ಪರಿಚಯ ಇಲ್ಲ. ಸದರಿ ದೇವರಾಜುರವರು ನಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸದರಿಯವರು ಮಲ್ಲಸಂದ್ರದಲ್ಲಿ ಇದ್ದಿರಬಹುದು, ಆದರೆ ನಾನು ಜಿಲ್ಲಾಪಂಚಾಯಿತಿ ತೋಟಗಾರಿಕೆ ಇಲಾಖೆ, ನಾಗಮಂಗಲದಲ್ಲಿ ಕೆಲಸ ಮಾಡುತ್ತಿದ್ದೆ. ನಾನು, ದೇವರಾಜು ಮತ್ತು ಬೋರೇಗೌಡ ಒಟ್ಟಿಗೆ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ನಾನು ಮತ್ತು ಬೋರೇಗೌಡರು 2012 ರವರೆಗೆ ಕೆಲಸ ಮಾಡುತ್ತಿದ್ದೆವು, ನಂತರ ನಾನು ನಿವೃತ್ತಿಯಾದೆ ಎಂದು ನುಡಿಯುವರು.

6. ನನಗೆ ಕಸುವಿನ ಹಳ್ಳಿ ರುದ್ರೇಶ ಎಂಬುವವರ ಪರಿಚಯ ಇದೆ ಎಂದರೆ ಸರಿಯಲ್ಲ. ಅದೇರಿತಿ ಪಾಲಗ್ರಹಾರದ ನಿತ್ಯಾನಂದ ಕುಮಾರ್ ಮತ್ತು ಯೋಗೇಶ್ ರವರ ಪರಿಚಯ ಇದೆ ಎಂದರೆ ನಿತ್ಯಾನಂದ ಕುಮಾರ್ ರವರ ಪರಿಚಯ ಇದೆ ಎಂದು ನುಡಿಯುವರು.

7. ನಾನು 31.05.2012 ರಲ್ಲಿ ನಿವೃತ್ತಿಯಾಗಿದ್ದೇನೆ. ನಾನು ವಯೋನಿವೃತ್ತಿಯಾಗಿದ್ದೆನು. ನಾನು ನಿವೃತಿಯಾಗುವ ಕಾಲಕ್ಕೆ ಬೋರೇಗೌಡರು ಸೇವೆಯಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಾನು ಮಳವಳ್ಳಿಯಲ್ಲಿದ್ದಾಗ ನಿವೃತ್ತಿಯಾಗಿದ್ದೇನೆ ಎಂದು ನುಡಿಯುವರು. ನಾನು ನಿವೃತ್ತಿಯಾಗುವಾಗ ದೇವರಾಜು ಎಂಬುವವರು ಕೂಡ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

8. ನಾನು, ಬೋರೇಗೌಡ, ದೇವರಾಜು, ಯೋಗೇಶ್, ಸುರೇಶ್, ನಿತ್ಯಾನಂದ ಕುಮಾರ್, ಗೋವಿಂದ, ತಮ್ಮಣ್ಣಗೌಡ ರವರೆಲ್ಲರೂ ಕೂಡ ನಾಗಮಂಗಲದ ಟಿ.ಬಿ ಸರ್ಕಲ್ ನ ಹತ್ತಿರ ಚಹಾದ ಅಂಗಡಿಯಲ್ಲಿ ಸೇರುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಟೀ ಅಂಗಡಿಯನ್ನು ಮಿಲ್ ಕೃಷ್ಣೇಗೌಡರವರು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಮಾಜಿ ಎಂ.ಎಲ್.ಎ ಸುರೇಶ್ ಗೌಡರವರ ಮನೆಯ ಪಕ್ಕದಲ್ಲಿಯೇ ಟಿ ಅಂಗಡಿ ಇತ್ತು ಎಂದರೆ ಸರಿಯಲ್ಲ. ನಮ್ಮ ತೋಟಗಾರಿಕೆ ಇಲಾಖೆಯಿಂದ ಸದರಿ ಟೀ ಅಂಗಡಿಗೆ 50 ಮೀಟರ್ ಅಂತರ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಲ್ಲಾ ವಿಚಾರಗಳು ತಿಳಿದಿದ್ದರೂ ಕೂಡ ಉದ್ದೇಶಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಎಂ.ಎಲ್.ಎ ಸುರೇಶ್ ಗೌಡ ರವರ ಮನೆ ಇರುವುದು ಪಾಲಗ್ರಹಾರ ರಸ್ತೆಯಲ್ಲಿ ಇದೆ ಎಂದರೆ ಸರಿ. ಸದರಿಯವರ ಮನೆ ನಮ್ಮ ಇಲಾಖೆಯಿಂದ

ಅಂದಾಜು 50 ಮೀಟರ್ ನ ಒಳಗೆಯೇ ಬರುತ್ತದೆ ಎಂದರೆ ಇರಬಹುದು. ಸದರಿಯವರ ಮನೆಯ ಮುಂಬಾಗದಲ್ಲಿಯೇ ಈ ದಾವೆಯ ವಾದಿಯ ಪರ ವಕೀಲರು ತಮ್ಮ ಮನೆಯಲ್ಲಿಯೇ ಕಛೇರಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

10. ನಾನು ನಾಗಮಂಗಲದ ನಮ್ಮ ಕಛೇರಿಗೆ ಬರುವಾಗ ಅಕ್ಕಪಕ್ಕದ ಯಾವುದೇ ಅಂಗಡಿ ಮುಂಗಟ್ಟುಗಳನ್ನು ನೋಡದೆ ನೇರವಾಗಿ ಕಛೇರಿಗೆ ಬಂದು ಹೋಗುತ್ತಿದ್ದೆ. ಮೈಲಾರಪಟ್ಟಣ ಸರ್ಕಲ್ ನಿಂದ ನಮ್ಮ ಕಛೇರಿಗೆ ಹೋಗುವ ವರೆಗೂ ಅಕ್ಕಪಕ್ಕದಲ್ಲಿರುವ ಅಂಗಡಿ ಮುಂಗಟ್ಟುಗಳನ್ನು ಗಮನಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅವುಗಳನ್ನು ಗಮನಿಸಿಲ್ಲ ಮತ್ತು ಅದರ ಅವಶ್ಯಕತೆ ಇರಲಿಲ್ಲ ಎಂದು ಉತ್ತರಿಸುವರು.

11. ನಾನು ಈಗ ವಾಸವಿರುವ ಜಾಗವು ಪಾಲಗ್ರಹಾರ ರಸ್ತೆ ಎಂದರೆ ಸರಿ. ನಾನು ನನ್ನ ಮಗಳ ಮನೆಯಲ್ಲಿ ವಾಸವಾಗಿದ್ದೇನೆ. ಸದರಿ ಮನೆಯು ಕೋಟೆಬೆಟ್ಟ ಅಥವಾ ಪಾಲಗ್ರಹಾರ ರಸ್ತೆಯಲ್ಲಿ ಬರುತ್ತದೆ. ಮೈಲಾರಪಟ್ಟಣ ಸರ್ಕಲ್ ನಿಂದ ನನ್ನ ಮಗಳ ಮನೆ ಅಂದಾಜು ಮುಕ್ಕಾಲು ಕಿ.ಮೀಟರ್ ಆಗುತ್ತದೆ. ಸದರಿ ನನ್ನ ಮಗಳ ಮನೆಯಲ್ಲಿ ಕಳೆದ 2 ವರ್ಷಗಳಿಂದ ವಾಸವಾಗಿದ್ದೇನೆ. ಅದಕ್ಕಿಂತ ಮುಂಚೆ ನಾಗಮಂಗಲದ ಶನಿದೇವರ ಪಕ್ಕದಲ್ಲಿರುವ ನಾಗರಾಜು ಎಂಬುವವರ ಮನೆಯಲ್ಲಿ ವಾಸವಾಗಿದ್ದೆ. ಸದರಿಯವರ ಮನೆಯಲ್ಲಿ ಅಂದಾಜು 8-10 ವರ್ಷಗಳ ಕಾಲ ವಾಸವಾಗಿದ್ದೆ. ನಾನು ಸುಮಾರು 14 ವರ್ಷಗಳಿಂದ ಪಾಲಗ್ರಾಹಾರ ಅಥವಾ ಕೋಟೆಬೆಟ್ಟ ರಸ್ತೆಯಲ್ಲಿಯೇ ವಾಸವಿರುವುದರಿಂದ ಸದರಿ ರಸ್ತೆಯಲ್ಲಿರುವ ಅಕ್ಕಪಕ್ಕದ ಅಂಗಡಿ ಮುಂಗಟ್ಟುಗಳ ಪರಿಚಯ ಇದೆಯಾ ಎಂದರೆ ಸಾಕ್ಷಿಯು

**ಅಸಲು ದಾವಾ ಸಂಖ್ಯೆ. 277/2017**
**ವಾ.ಸಾ-2**

ರಸ್ತೆಯ ಪರಿಚಯ ಇದೆ ಆದರ ಅಕ್ಕಪಕ್ಕದಲ್ಲಿ ಏನೆಲ್ಲಾ ಇದೆ ಎಂದು ಗೊತ್ತಿಲ್ಲ ಎಂದು ಉತ್ತರಿಸುವರು.

12. ನನಗೆ ತಮ್ಮಣ್ಣಗೌಡ ಎಂಬುವವರ ಇತ್ತೀಚೆಗೆ ಪರಿಚಯವಾಗಿದ್ದಾರೆ. ಸದರಿಯವರು ನನಗೆ 2014 ರ ಆಗಸ್ಟ್ ತಿಂಗಳಿನಿಂದ ಪರಿಚಯವಾಗಿದ್ದಾರೆ. ಸದರಿಯವರ ಕುಟುಂಬದ ಬಗ್ಗೆ ಮತ್ತು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ತಮ್ಮಣ್ಣಗೌಡರು ಸುಮಾರು 25 ವರ್ಷಗಳಿಂದ ಒಟ್ಟಿಗೆ ಇದ್ದೇವೆ ಎಂದರೆ ಸರಿಯಲ್ಲ. ಅದೇರಿತಿ ಬೋರೇಗೌಡ, ದೇವರಾಜು, ಯೋಗೇಶ್, ಸುರೇಶ್, ನಿತ್ಯಾನಂದ ಕುಮಾರ್, ಗೋವಿಂದರವರುಗಳು ಮತ್ತು ನಾವು ಸ್ನೇಹಿತರು ಎಂದರೆ ಸರಿಯಲ್ಲ. ಸದರಿ ತಮ್ಮಣ್ಣಗೌಡರು ಕೂಡ ಟಿ.ಬಿ ಬಡವಾಣೆಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ.

13. ನವೆಂಬರ್ 2014 ರ ಮದ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ನಾನು, ಬೋರೇಗೌಡ ಮತ್ತು ತಮ್ಮಣ್ಣಗೌಡರವರು ವಾದಿಯ ಮನೆಗೆ ಹೋಗಿ ಹಣವನ್ನು ಪಡೆದುಕೊಂಡೆವು. ಸದರಿ ಸಮಯಕ್ಕೆ ನಾನು, ಬೋರೇಗೌಡ ತಮ್ಮಣ್ಣಗೌಡ ಮತ್ತು ವಾದಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ವಾದಿಯ ಮನೆಯ ಪಾಲಗ್ರಾಹಾರದಲ್ಲಿ ವಾದಿಯು ಮೃತ ಬೋರೇಗೌಡರಿಗೆ ಹಣವನ್ನು ಕೊಟ್ಟಿದ್ದರು.

14. ವಾದಿಯ ಮನೆ ನನಗೆ ಸಂಪೂರ್ಣವಾಗಿ ಗೊತ್ತಿದೆ ಎಂದರೆ ಸರಿ. ವಾದಿಯು ನನಗೆ ಅಂದಾಜು 2010 ರಿಂದ ಪರಿಚಯವಾಗಿದ್ದಾರೆ. ವಾದಿಯು ಕೂಡ ನಮ್ಮ ಇಲಾಖೆಯಲ್ಲಿ ಸಸಿಗಳನ್ನು ಪಡೆದಿದ್ದರು ಎಂದರೆ ಇರಬಹುದು. ಸದರಿಯವರು ನಮ್ಮ ಇಲಾಖೆಯಲ್ಲಿ ಸವಲತ್ತುಗಳನ್ನು ಪಡೆದುಕೊಂಡಿದ್ದಾರೆ ಎಂದರೆ ನಾನು ನಾಗಮಂಗಲ ಇಲಾಖೆಯಲ್ಲಿ ಇರುವಾಗ ಪಡೆದಿಲ್ಲ ಎಂದು ನುಡಿಯುವರು.

**ಅಸಲು ದಾವಾ ಸಂಖ್ಯೆ. 277/2017**
**ವಾ.ಸಾ-2**

ನಾನು ನಾಗಮಂಗಲದಲ್ಲಿ 1996 ರಿಂದ ಮಲ್ಲಸಂದ್ರ ಕಾವಲ್ ನಲ್ಲಿದ್ದೆ. 2005 ನವೆಂಬರ್ ನಿಂದ 2010 ರವರೆಗೆ ಜಿಲ್ಲಾ ಪಂಚಾಯಿತಿ ತೋಟಗಾರಿಕೆ ಇಲಾಖೆ ನಾಗಮಂಗಲದಲ್ಲಿ ಇದ್ದೆ. ನಂತರ ನಾನು ಮಳವಳ್ಳಿಯಲ್ಲಿ ಕೆಲಸ ಮಾಡಿದ್ದೇನೆ.

15. 2005 ರಿಂದ ನಾಗಮಂಗಲದಲ್ಲಿ ಸುಮಾರು 7-8 ವರ್ಷಗಳ ವರೆಗೆ ಕೆಲಸ ಮಾಡಿದ್ದೇನೆ. ನಾನು ಉದ್ದೇಶಪೂರ್ವಕವಾಗಿ ಸತ್ಯಾಂಶ ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2005 ರಿಂದ 7-8 ವರ್ಷ ಎಂದರೆ 2012-13 ರವರೆಗೆ ಆಗುತ್ತದೆ ಎಂದರೆ ಸಾಕ್ಷಿಯು 2010 ರವರೆಗೆ ಮಾಡಿದ್ದೇನೆ ಎಂದು ನುಡಿಯುವರು.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**